# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

## ಕೇಂದ್ರ ಕಛೇರಿ : ಸಾರಿಗೆ ಭವನ

## ಬೆಂಗಳೂರು – 560 027

**<u>ಚಾಲನಾ ಪರೀಕ್ಷೆಗಳ ವಿಧಾನದ ಪರಿಚಯ / ಮಾರ್ಗದರ್ಶಿ</u>**

**<u>ವಿಶೇಷ ಸೂಚನೆ</u>** :

❖ **ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಆಯ್ಕೆ ವಿಧಾನ** :

ಅ) ಚಾಲಕ-ಕಂ-ನಿರ್ವಾಹಕ ಹುದ್ದೆಗೆ ನಿಗದಿಪಡಿಸಿದ ಎಲ್ಲಾ ವಿಧ್ಯಾರ್ಹತೆಯನ್ನು ಹೊಂದಿರುವ ಹಾಗೂ ಮೂಲ ದಾಖಲಾತಿ ಪರಿಶೀಲನೆ ಮತ್ತು ಚಾಲಕ ವೃತ್ತಿ ಪರೀಕ್ಷೆಗಾಗಿ ಹಾಜರಾಗುವ ಅಭ್ಯರ್ಥಿಗಳು, ಚಾಲನಾ ವೃತಿ ಪರೀಕ್ಷೆಯಲ್ಲಿ ತಲಾ 25 ಅಂಕಗಳಿಗೆ ಎರಡು ಪ್ರತ್ಯೇಕ ಚಾಲನಾ ಸಾಮರ್ಥ್ಯದ ಪರೀಕ್ಷೆ ನಡೆಸಲಾಗುತ್ತದೆ. ಈ ಪರೀಕ್ಷೆಯಲ್ಲಿ ಒಟ್ಟಾರೆ 50 ಅಂಕಗಳಿಗೆ 25 ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಉತ್ತೀರ್ಣರೆಂದು ಪರಿಗಣಿಸಿ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಜಾರಿಯಲ್ಲಿರುವ ಮೀಸಲಾತಿ ನಿಯಮಾನುಸಾರ ಆಯ್ಕೆ ಮಾಡಲಾಗುವುದು. ಚಾಲನಾ ಪರೀಕ್ಷೆ ಮುಗಿದ ನಂತರ ಅಭ್ಯರ್ಥಿಗಳು ಗಳಿಸಿದ ಅಂಕಪಟ್ಟಿಯನ್ನು ನೀಡಲಾಗುವುದು.



ಆ) ಚಾಲನಾ ಪರೀಕ್ಷೆಯನ್ನು ಗಣಕೀಕರಣಗೊಳಿಸಲಾಗಿದ್ದು ಸಂಪೂರ್ಣ ಪಾರದರ್ಶಕವಾಗಿರುತ್ತದೆ. **<u>"ಅಭ್ಯರ್ಥಿಗಳು, ಮಧ್ಯವರ್ತಿಗಳ ಸುಳ್ಳು ಆಶ್ವಾಸನೆಗೆ ಮೋಸ ಹೋಗಬಾರದೆಂದು ಹಾಗೂ ಯಾವುದೇ ರೀತಿಯ ಶಿಫಾರಸ್ಸು ಒತ್ತಡ ತರಬಾರದೆಂದು ಈ ಮೂಲಕ ಸೂಚಿಸಲಾಗಿದೆ".</u>**



1. <u>ಮೊದಲನೆ ಹಂತ</u> :-

ಅ) ಜಾಹೀರಾತಿನ ಅನುಸಾರ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಮಯದಲ್ಲಿ ಚಾಲಕ-ಕಂ-ನಿರ್ವಾಹಕ ಹುದ್ದೆಯ ಅರ್ಜಿಯಲ್ಲಿ ನಮೂದಿಸಲಾಗಿರುವ ವಿವರಗಳನ್ನು ಮೂಲ ದಾಖಲಾತಿಗಳೊಂದಿಗೆ ಪರಿಶೀಲನೆ ಮಾಡಲಾಗುವುದು.

ಆ) ಅಭ್ಯರ್ಥಿಗಳ ಎತ್ತರ ಮತ್ತು ತೂಕವನ್ನು ಅಳತೆ ಮಾಡುವ ವಿದ್ಯುನ್ಮಾನ ಯಂತ್ರದ ಮೂಲಕ ಗಣಿಕೀಕೃತ ವಿಧಾನದಿಂದ ದಾಖಲಿಸಲಾಗುವುದು.

ಇ) ಮೂಲ ದಾಖಲಾತಿ ಪರಿಶೀಲನೆ ಮುಗಿದ ನಂತರ ಪರಿಶೀಲನಾ ಪಟ್ಟಿಯನ್ನು ಅಭ್ಯರ್ಥಿಗಳಿಗೆ ನೀಡಲಾಗುವುದು.

ಈ) ಚಾಲಕ-ಕಂ-ನಿರ್ವಾಹಕ ಹುದ್ದೆಗೆ ನಿಗಧಿಪಡಿಸಿದ ಎಲ್ಲಾ ಅರ್ಹತೆಯನ್ನು ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ ಚಾಲನಾ ವೃತ್ತಿ ಪರೀಕ್ಷೆಗೆ ಅನುಮತಿಸಲಾಗುವುದು.

2. <u>ಎರಡನೆ ಹಂತ</u> :-

ಚಾಲನಾ ಪರೀಕ್ಷೆಯು ಕೆಳಕಂಡಂತೆ ಒಟ್ಟು 5 ಪರೀಕ್ಷೆಗಳನ್ನು ಹೊಂದಿರುತ್ತದೆ. ಒಂದು ಪರೀಕ್ಷೆಯನ್ನು ಪ್ರತಿ ಅಭ್ಯರ್ಥಿಗೆ ಎರಡು ಬಾರಿ ನಡೆಸಲಾಗುವುದು.

1. ಸಂಚಾರ ಸಂಕೇತಗಳನ್ನು ಗುರುತಿಸುವುದು.
2. ಬಸ್ಸನ್ನು **"8"** ರ ಪಥದಲ್ಲಿ ಮುಂದಕ್ಕೆ ಚಾಲಿಸುವುದು.
3. ಬಸ್ಸನ್ನು **"S"** ನ ಪಥದಲ್ಲಿ ಹಿಂದಕ್ಕೆ ಚಾಲಿಸುವುದು.
4. ಬಸ್ಸನ್ನು ಹಿಂದಕ್ಕೆ ಚಾಲಿಸಿ ನಿಲ್ಲಿಸುವುದು.
5. ಬಸ್ಸನ್ನು ಏರುಗತಿಯಲ್ಲಿ ನಿಲ್ಲಿಸಿ, ಮುಂದಕ್ಕೆ ಚಾಲಿಸುವುದು.



1. <u>ಸಂಚಾರ ಸಂಕೇತಗಳನ್ನು ಗುರುತಿಸುವುದು.</u>

**ಅಂಕಗಳು** : 2 + 2 = 4
**ಸಮಯ: 2 ನಿಮಿಷ.**

ಅಭ್ಯರ್ಥಿಗಳು ವಿದ್ಯುನ್ಮಾನ ಯಂತ್ರದಲ್ಲಿ ತೋರಿಸುವ ನಾಲ್ಕು ರಸ್ತೆ ಸಂಕೇತಗಳಲ್ಲಿ, 8 ಆಯ್ಕೆಗಳನ್ನು ಕೊಡಲಾಗುವುದು, ಅದರಲ್ಲಿ 4 ಸರಿ ಉತ್ತರಗಳಿರುತ್ತವೆ. ಅಭ್ಯರ್ಥಿಯು ಕೊಟ್ಟಿರುವ ಸಂಕೇತಗಳಿಗೆ ಸರಿಯಾದ ಉತ್ತರವನ್ನು ಹೊಂದಿಸಬೇಕು ಇದಕ್ಕೆ 2 ನಿಮಿಷಗಳ ಕಾಲಾವಧಿ ನಿಗದಿಪಡಿಸಲಾಗಿದೆ. ಪ್ರತಿ ಸರಿ ಉತ್ತರಕ್ಕೆ ಅಭ್ಯರ್ಥಿಗೆ ½ ಅಂಕ ಕೊಡಲಾಗುವುದು.

<u>ಉದಾಹರಣೆ:</u>




1 2 3 4

| | |
|---|---|
| 1. ನಿಲುಗಡೆ ನಿಷೇದಿಸಿದೆ | 2. ಭಾರ ಮಿತಿ. |
| 3. ಅಗಲ ಮಿತಿ | 4. ಏಕಮುಖ ಸಂಚಾರ |
| 5. ವಾಹನಗಳನ್ನು ನಿಷೇದಿಸಿದೆ. | 6. ಕಡ್ಡಾಯ ಬಲತಿರುವು |
| 6. ವೇಗ ಮಿತಿ | 8. ಉದ್ದ ಮಿತಿ |

2. <u>ಬಸ್ಸನ್ನು "8" ರ ಪಥದಲ್ಲಿ ಮುಂದಕ್ಕೆ ಚಾಲಿಸುವುದು.</u>

**ಅಂಕಗಳು : 5 + 5 = 10**

**ಸಮಯ: 1 ನಿಮಿಷ.**

1. ಚಾಲನೆಯನ್ನು 1 ನಿಮಿಷದಲ್ಲಿ ಪೂರ್ಣಗೊಳಿಸತಕ್ಕದ್ದು.
2. ಚಾಲನೆಯು 1 ನಿಮಿಷದೊಳಗೆ ಪೂರ್ಣಗೊಳಿಸಿದಲ್ಲಿ ಯಾವುದೇ ಅಂಕಗಳ ಕಡಿತವಿಲ್ಲ.
3. ಚಾಲನೆಯು 1 ರಿಂದ 1 ½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 1 ಅಂಕವನ್ನು ಕಡಿತಗೊಳಿಸಲಾಗುವುದು.
4. ಚಾಲನೆಯು 1 ½ ರಿಂದ 2 ನಿಮಿಷದೊಳಗೆ ಪೂರ್ಣಗೊಂಡಲ್ಲಿ 2 ಅಂಕಗಳನ್ನು ಕಡಿತಗೊಳಿಸಲಾಗುವುದು.
5. ಚಾಲನೆಯು 2 ರಿಂದ 2 ½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 3 ಅಂಕಗಳನ್ನು ಕಡಿತಗೊಳಿಸಲಾಗುವುದು.
6. ಚಾಲನೆಯು 2½ ರಿಂದ 3 ನಿಮಿಷದೊಳಗೆ ಪೂರ್ಣಗೊಂಡಲ್ಲಿ 4 ಅಂಕಗಳನ್ನು ಕಡಿತಗೊಳಿಸಲಾಗುವುದು.
7. ಚಾಲನೆಯು 3 ನಿಮಿಷವನ್ನು ಮೀರಿದಲ್ಲಿ ಯಾವುದೇ ಅಂಕಗಳನ್ನು ಕೊಡಲಾಗುವುದಿಲ್ಲ.
8. ಪ್ರತಿ ಕಂಬದ ಉರುಳುವಿಕೆ 1 ಅಂಕವನ್ನು ಕಡಿತಗೊಳಿಸಲಾಗುವುದು.

   ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು "8" ರ ಪಥದಲ್ಲಿ ಮುಂದಕ್ಕೆ ಚಾಲಿಸುವುದು.






3. <u>ಬಸ್ಸನ್ನು "S" ರ ಪಥದಲ್ಲಿ ಹಿಂದಕ್ಕೆ ಚಾಲಿಸುವುದು.</u>

**ಅಂಕಗಳು : 7 + 7 = 14**

**ಸಮಯ: 3 ನಿಮಿಷ.**

1. ಈ ಚಾಲನೆಗೆ 3 ನಿಮಿಷಗಳ ಕಾಲಾವಧಿ ನಿಗಧಿಪಡಿಸಲಾಗಿದೆ.
2. ಚಾಲನೆಯು 3 ನಿಮಿಷದೊಳಗೆ ಪೂರ್ಣಗೊಳಿಸಿದಲ್ಲಿ ಯಾವುದೇ ಅಂಕಗಳ ಕಡಿತವಿಲ್ಲ.
3. ಚಾಲನೆಯು 3 ರಿಂದ 3½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 1 ಅಂಕವನ್ನು ಕಡಿತಗೊಳಿಸಲಾಗುವುದು.
4. ಚಾಲನೆಯು 3½ ರಿಂದ 4 ನಿಮಿಷದೊಳಗೆ ಪೂರ್ಣಗೊಂಡಲ್ಲಿ 2 ಅಂಕವನ್ನು ಕಡಿತಗೊಳಿಸಲಾಗುವುದು.
5. ಚಾಲನೆಯು 4 ರಿಂದ 4½ ನಿಮಿಷದೊಳಗೆ ಪೂರ್ಣಗೊಂಡಲ್ಲಿ 3 ಅಂಕವನ್ನು ಕಡಿತಗೊಳಿಸಲಾಗುವುದು.
6. ಚಾಲನೆಯು 4½ ರಿಂದ 5 ನಿಮಿಷದೊಳಗೆ ಪೂರ್ಣಗೊಂಡಲ್ಲಿ 4 ಅಂಕವನ್ನು ಕಡಿತಗೊಳಿಸಲಾಗುವುದು.
7. ಚಾಲನೆಯು 5 ನಿಮಿಷವನ್ನು ಮೀರಿದಲ್ಲಿ ಯಾವುದೇ ಅಂಕಗಳನ್ನು ಕೊಡಲಾಗುವುದಿಲ್ಲ.
8. ಪ್ರತಿ ಕಂಬದ ಉರುಳುವಿಕೆ 1 ಅಂಕವನ್ನು ಕಡಿತಗೊಳಿಸಲಾಗುವುದು.

   ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು "S" ರ ಪಥದಲ್ಲಿ ಮುಂದಕ್ಕೆ ಚಾಲಿಸುವುದು.



4. <u>ಬಸ್ಸನ್ನು ಹಿಮ್ಮುಕ ಚಾಲಿಸಿ ನಿಲುಗಡೆ ಮಾಡುವುದು.</u>

**ಅಂಕಗಳು : 6 + 6 = 12**

**ಸಮಯ: 1 ನಿಮಿಷ.**

1. ಇದಕ್ಕೆ 1 ನಿಮಿಷ ಕಾಲಾವದಿ ನಿಗಧಿಪಡಿಸಲಾಗಿದೆ.
2. ನಿಲಗಡೆಯು 1 ನಿಮಿಷದೊಳಗೆ ಪೂರ್ಣಗೊಳಿಸಿದಲ್ಲಿ ಯಾವುದೇ ಅಂಕಗಳ ಕಡಿತವಿಲ್ಲ.
3. ನಿಲುಗಡೆಯು 1 ರಿಂದ 1 ½ ನಿಮಿಷದಲ್ಲಿ ಪೂರ್ಣಗೊಂಡಲ್ಲಿ 1 ಅಂಕವನ್ನು ಕಡಿತಗೊಳಿಸಲಾಗುವುದು.
4. ನಿಲುಗಡೆಯು 1 ½ ರಿಂದ 2 ನಿಮಿಷದಲ್ಲಿ ಪೂರ್ಣಗೊಂಡಲ್ಲಿ 2 ಅಂಕಗಳನ್ನು ಕಡಿತಗೊಳಿಸಲಾಗುವುದು.
5. ನಿಲುಗಡೆಯು 2 ರಿಂದ 2 ½ ನಿಮಿಷದಲ್ಲಿ ಪೂರ್ಣಗೊಂಡಲ್ಲಿ 3 ಅಂಕಗಳನ್ನು ಕಡಿತಗೊಳಿಸಲಾಗುವುದು.
6. ನಿಲುಗಡೆಯು 3 ನಿಮಿಷದೊಳಗೆ ಪೂರ್ಣಗೊಂಡಲ್ಲಿ 4 ಅಂಕಗಳನ್ನು ಕಡಿತಗೊಳಿಸಲಾಗುವುದು.
7. ನಿಲುಗಡೆಯು 3 ನಿಮಿಷವನ್ನು ಮೀರಿದಲ್ಲಿ ಯಾವುದೇ ಅಂಕವನ್ನು ಕೊಡಲಾಗುವುದಿಲ್ಲ.
8. ಪ್ರತಿ ಕಂಬದ ಉರುಳುವಿಕೆ 1 ಅಂಕವನ್ನು ಕಡಿತಗೊಳಿಸಲಾಗುವುದು.

ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು ಹಿಮ್ಮುಖ ಚಾಲಿಸಿ ನಿಲುಗಡೆ ಮಾಡುವುದು.






5. <u>ಬಸ್ಸನ್ನು ಏರುಗತಿಯಲ್ಲಿ ನಿಲ್ಲಿಸಿ, ಮುಂದಕ್ಕೆ ಚಾಲಿಸುವುದು.</u>

**ಅಂಕಗಳು : 5 + 5 = 10**

**ಸಮಯ : ಇಲ್ಲ**

1. ಏರುಗತಿಯಲ್ಲಿ ಚಾಲಿಸಿ ವಾಹನವನ್ನು ನಿಲ್ಲಿಸುವುದು. ಹ್ಯಾಂಡ್ ಬ್ರೇಕ್‌ನ್ನು ಉಪಯೋಗಿಸುವುದು.
2. ಇಂಜಿನನ್ನು ನಿಲ್ಲಿಸುವುದು.
3. ಏರುಗತಿಯಲ್ಲಿ ವಾಹನವನ್ನು ಚಾಲಿಸಲು ಇಂಜಿನನ್ನು ಚಾಲನೆಗೊಳಿಸುವುದು.
4. ವಾಹನವು ಹಿಂದಕ್ಕೆ ಬಾರದೇ ಮುಂದೆ ಚಲಿಸಿದರೆ ಯಾವುದೇ ಅಂಕಗಳ ಕಡಿತವಿಲ್ಲ.
5. ವಾಹನವು 4 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 1 ಅಂಕಗಳನ್ನು ಕಡಿತಗೊಳಿಸಲಾಗುವುದು.
6. ವಾಹನವು 4 ರಿಂದ 8 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 2 ಅಂಕಗಳನ್ನು ಕಡಿತಗೊಳಿಸಲಾಗುವುದು.
7. ವಾಹನವು 8 ರಿಂದ 12 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 3 ಅಂಕಗಳನ್ನು ಕಡಿತಗೊಳಿಸಲಾಗುವುದು.
8. ವಾಹನವು 12 ರಿಂದ 16 ಅಂಗುಲದಷ್ಟು ಹಿಂದಕ್ಕೆ ಚಲಿಸಿದರೆ 4 ಅಂಕಗಳನ್ನು ಕಡಿತಗೊಳಿಸಲಾಗುವುದು.
9. ವಾಹನವು 16 ಅಂಗುಲಕ್ಕಿಂತ ಜಾಸ್ತಿ ಹಿಂದಕ್ಕೆ ಚಲಿಸಿದರೆ ಯಾವುದೇ ಅಂಕವನ್ನು ಕೊಡಲಾಗುವುದಿಲ್ಲ.

ಈ ಕೆಳಗೆ ಸೂಚಿಸಿರುವ ಚಿತ್ರದ ಮಾದರಿಯಲ್ಲಿ ಬಸ್ಸನ್ನು ನಿಲ್ಲಿಸಿ ಏರುಗತಿಯಲ್ಲಿ ಚಾಲಿಸುವುದು.



ಹಿಮ್ಮುಖ ಚಾಲನೆಯನ್ನು ಗುರುತಿಸುವುದು.